ಸಿ.ಸಿ .ನಂ. 214/2022 ಪಿಡಬ್ಲೂಃ 1

ದಿನಾಂಕಃ 19-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎನ್ ಎಮ್ ಎನ್ ವಕೀಲರಿಂದಃ**

5. ಅಕೌಂಟ್ ಸ್ಟೇಟ್ಮೆಂಟ್ ನಲ್ಲಿ ಎಫ್ ಡಿ ಹಣ ಅಜೆಸ್ಟ ಮಾಡಿದ ಬಗ್ಗೆ ತೋರಿಸಿರುತ್ತೇವೆ . ಷೇರು ಹಣ ಎರಡುವರೆ ಸಾವಿರ ರೂಪಾಯಿ ಹಾಗೆಯೇ ಇದೆ ಸಾಲವನ್ನು ಪಡೆದ ನಂತರ ಸೆಕ್ಯುರಿಟಿಗಾಗಿ ಎಲ್ ಐ ಸಿ ಪಾಲಿಸಿ ಮಾಡಿಲ್ಲ. ಸಾಲವನ್ನು ಪಡೆದ ನಂತರ ಗೀತಾ ಶಿವಾನಂದ ಆಚಾರಿ ಇವರ ಖಾತೆಗೆ ಕೇವಲ ಮೂರು ಸಾವಿರ ರೂಪಾಯಿ ಕಟ್ಟಿರುತ್ತಾರೆ . 2 ನೇ ಖಾತೆಯಲ್ಲಿ ಯಾವುದೇ ಹಣ ಕಟ್ಟಿಲ್ಲ . ಸಾಲ ಹಣ ಮರುಪಾವತಿ ಆಗಿಲ್ಲ ಎಂದು ಅವರಿಗೆ ರಜಿಸ್ಟರ್ ಪೋಸ್ಟ ಮೂಲಕ ಹಾಗೂ ಲೀಗಲ್ ನೋಟಿಸನ್ನು ಕೊಟ್ಟಿರುತ್ತೇವೆ . ನಾವು ದಾಖಲಿಸಿದ ಕೇಸು ಎರಡು ಸಾಲದ ಖಾತೆಗೆ ಸಂಬಂಧಪಟ್ಟಿದ್ದು ಎಂದರೆ ಸರಿ . ನಾವು ರಿಕವರಿಗೆ ಹೊದಾಗ ಚೆಕ್ ನ್ನು ನೀಡಿರುತ್ತಾರೆ . ಜೂನ್ 2021 ರಲ್ಲಿ ನೀಡಿರುತ್ತಾರೆ . ನಾವು ದಿ 10-06-2021 ರಂದು ಬ್ಯಾಂಕಿಗೆ ಚೆಕ್ ನ್ನು ಹಾಜರು ಪಡಿಸಿರುತ್ತೇವೆ . ಚೆಕ್ ನಲ್ಲಿರುವ ಬರವಣಿಗೆ ಅವರೇ ಬರೆದುಕೊಟ್ಟಿರುತ್ತಾರೆ . ಚೆಕ್ ನ್ನು ದಿಃ 10-08-2021 ಕ್ಕೆ ಹಾಜರು ಪಡಿಸುವುದಾಗಿ ಚೆಕ್ ನಲ್ಲಿ ದಿನಾಂಕ ನಮೂದು ಇದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಚೆಕ್ ನ್ನು ಜೂನ್ ನಲ್ಲಿ ಕೊಟ್ಟಿಲ್ಲ , ಅಗಷ್ಟನಲ್ಲಿ ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ . ಚೆಕ್ ನ್ನು ನೀಡುವಾಗ ಆರೋಪಿ ಹಾಗೂ ಅವರ ಮನೆಯವರು ಇದ್ದರು. ಎಷ್ಟು ಬಾಕಿ ಇದೆ ಎಂದು ಕೇಳಿದರು , ನಾವು ರೂ. 1,07,992/- ಎಂದು ಹೇಳಿದೆವು. ನಾವು ರಿಕವರಿಗೆ ಹೋಗುವಾಗ ನೋಟ್ ಮಾಡಿಕೊಂಡೇ ಹೋಗುತ್ತೇವೆ . ಎರಡು ಸಾಲಕ್ಕೆ ಸೇರಿ ಚೆಕ್ ನ್ನು ಪಡೆದುಕೊಳ್ಳಬಹುದು ಎಂದು ಕರಾರು ಪಡೆದುಕೊಂಡಿಲ್ಲ , ಅವರು ಜಾಮೀನುದಾರರಾಗಿದ್ದರಿಂದ ಎರಡು ಸಾಲ ಸೇರಿ ಚೆಕ್ ನ್ನು ಕೊಡಬಹುದು. ಎರಡು ಸಾಲಕ್ಕೆ ಸೇರಿ ಚೆಕ್ ನ್ನು ಪಡೆಯುಬಹುದು ಎಂದು ಬೈಲಾದಲ್ಲಿ ಇದೆ . ಎರಡು ಸಾಲಕ್ಕೆ ಸೇರಿ ಒಬ್ಬ ವ್ಯಕ್ತಿಯಿಂದ ಚೆಕ್ ನ್ನು ಪಡೆಯುಬಹುದು ಎಂದು ಬೈಲಾದಲ್ಲಿ ಏನು ಬರೆದುಕೊಂಡಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಅದು ಪ್ರಧಾನ ಕಚೇರಿಯಲ್ಲಿದೆ ಎಂದು ನುಡಿದಿರುತ್ತಾರೆ . ಎರಡು ಸಾಲಕ್ಕೆ ಸಂಬಂಧಪಟ್ಟಂತೆ ಒಂದು ಚೆಕ್ ನ್ನು

ಪಿಡಬ್ಲೂಃ 1

ಪಡೆದುಕೊಳ್ಳಲು ನಾನು ನಮ್ಮ ಮೇಲಾಧಿಕಾರಿಯ ಅನುಮತಿಯನ್ನು ಪಡೆದಿದ್ದೆ . ಚೆಕ್ ನ್ನು ಬ್ಯಾಂಕಿಗೆ ಹಾಜರು ಪಡಿಸುವಾಗ ನಾನು ನಮ್ಮ ಜಿಎಮ್ ಜೊತಗೆ ಮಾತನಾಡಿದ್ದೆ. ರೂಲ್ಸಯಲ್ಲಿಯೇ ಇರುವುದರಿಂದ ಚೆಕ್ ಪಡೆದುಕೊಳ್ಳುವ ಮೊದಲು ನಾನು ಮೇಲಾಧಿಕಾರಿಗಳ ಅನಮತಿಯನ್ನು ಪಡೆದಿಲ್ಲ . ಬೈಲಾ ಪ್ರತಿಯನ್ನು ಹಾಜರು ಪಡಿಸಲು ಜನರಲ್ ಮ್ಯಾನೇಜರ್ ರವರ ಅನುಮತಿಯನ್ನು ಪಡೆಯಬೇಕು . ಆರೋಪಿ ಅರ್ಜಿಯನ್ನು ಹಾಕಿ ಬೈಲಾ ಪ್ರತಿಯನ್ನು ಪಡೆಯಲು ಅದಕ್ಕೆ ನಮ್ಮ ಯಾವುದೇ ಅಭ್ಯಂತರವಿಲ್ಲ . ಅಂತಹ ಯಾವುದೇ ಸಂಗತಿಗಳು ನಮ್ಮ ಬೈಲಾದಲ್ಲಿ ದಾಖಲಾಗಿಲ್ಲ ಎಂದರೆ ಸರಿಯಲ್ಲ . ಇದಕ್ಕೆ ಸಂಬಂಧಪಟ್ಟಂತೆ ಬೈಲಾದಲ್ಲಿಯೇ ದಾಖಲಾಗಿರುತ್ತದೆ .

6. ಚೆಕ್ ನಲ್ಲಿರುವ ಬರವಣಿಗೆ ಆರೋಪಿಯ ಹಸ್ತಾಕ್ಷರದಲ್ಲಿ ಇಲ್ಲ ಎಂದರೆ ಸಾಕ್ಷಿ ಬೇರೆಯವರ ಹತ್ತಿರ ಬರೆಸಿರಬಹುದು ಎಂದು ನುಡಿದಿರುತ್ತಾರೆ . ನಾನು ಮನೆಗೆ ಹೋಗಿ ಹೇಳಿದ್ದೆ , ಅವರು ಮಾರನೇ ದಿನ ಬ್ಯಾಂಕಿಗೆ ಬಂದು ಚೆಕ್ ನ್ನು ಕೊಟ್ಟರು . ಚೆಕ್ ನಲ್ಲಿ ನಮೂದಿಸಿದಷ್ಟು ಹಣ ಕಾಯ್ದೆ ಬದ್ಧವಾಗಿ ನಮಗೆ ಬರಬೇಕಾದದ್ದು ಇಲ್ಲ ಎಂದರೆ ಸರಿಯಲ್ಲ . ಎರಡು ಸಾಲದ ಖಾತೆಗೆ ಸಂಬಂಧಪಟ್ಟಂತೆ ಒಂದು ಚೆಕ್ ನ್ನು ಪಡೆದಿರುವುದು ಕಾಯ್ದೆಗೆ ವಿರುದ್ಧ ಎಂದರೆ ಸರಿಯಲ್ಲ . ಈ ರೀತಿಯ ಚೆಕ್ ನ್ನು ಕೊಡಬಹುದು ಎಂದು ಎರಡು ಸಾಲದ ಪಕ್ಷಗಾರರು ಏನಾದರೂ ಬರೆದುಕೊಟ್ಟಿರುವ ದಾಖಲಾತಿ ನಿಮ್ಮ ಬಳಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ . ಈ ಪ್ರಕರಣ ಕಲಂ 138 ಅಡಿ ಬರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.